## ಸಹಾಯಕ ಆಯುಕ್ತರ ಕಾರ್ಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/91/15-16

ದಿನಾಂಕ :26-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀಮತಿ ಹುಚ್ಚಮ್ಮ ಗಂಡ ಲೇಟ್ ಮೂಕಪ್ಪ,<br>ಸಾ\|\|ನಾಗನಾಥನಹಳ್ಳಿ ಗ್ರಾಮ, ತಾ\|\|ಆಲೂರು ಜಿ\|\|ಕರ್ನೂಲು<br>ರಾ\|\|ಆಂದ್ರ ಪ್ರದೇಶ<br><br>**ಶ್ರೀ ಡಿ ನಾರಾಯಣ, ವಕೀಲರು, ಬಳ್ಳಾರಿ** | 1. ತಹಶೀಲ್ದಾರರು, ಬಳ್ಳಾರಿ<br>2. ಕಂದಾಯ ನಿರೀಕ್ಷಕರು, ಮೋಕಾ<br>3. ಗ್ರಾಮ ಲೆಕ್ಕಾಧಿಕಾರಿಗಳು, ಸಿಂಧುವಾಳ<br>4. ಶ್ರೀಮತಿ ತಿಪ್ಪಮ್ಮ ಗಂಡ ಚಿಗವಾರು ತಿಮ್ಮಪ್ಪ,<br>ಸಾ\|\|ಗೂಳ್ಯಂ ಗ್ರಾಮ, ತಾ\|\|ಆಲೂರು ಜಿ\|\|ಕರ್ನೂಲು<br>ರಾ\|\|ಆಂದ್ರ ಪ್ರದೇಶ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಸಿಂಧುವಾಳ | 362D/2a(p) | 1.76 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಮೋಕಾ ಇವರ ಎಂ.ಆರ್ ನಂ 4248/1981-82 ದಿನಾಂಕ: 01-08-1982 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 30-10-2015, ಮತ್ತು 26-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಬಳ್ಳಾರಿ ತಾಲ್ಲೂಕಿನ ಸಿಂಧುವಾಳ ಗ್ರಾಮದ ಸ.ನಂ 362D/2a(p) ವಿಸ್ತೀರ್ಣ: 1.76 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಮೋಕಾ ಇವರ ಎಂ.ಆರ್ ನಂ 4248/1981-82 ದಿನಾಂಕ: 01-08-1982 ರಲ್ಲಿ ಜೆ - ಫಾರಂ ನಲ್ಲಿ 2.00 ಎಕರೆ ಎಂದು ನಮೂದು ಇದ್ದು, ದಾಖಲೆಗಳ ವಿಸ್ತೀರ್ಣ ವ್ಯತ್ಯಾಸದ ಕಾರಣವಾಗಿ, ಹಕ್ಕುಬದಲಾವಣೆಯನ್ನು ಕಂದಾಯ ನಿರೀಕ್ಷಕರು ಗೈರುಮಂಜೂರು ಮಾಡಿರತ್ತಾರೆ. ಸದರಿ ಗೈರು ಮಂಜೂರು ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರತ್ತಾರೆ.

ಸದರಿ ಜಮೀನನ್ನು ಮೇಲ್ಮನವಿದಾರರ ಗಂಡನಾದ ಮೂಕಪ್ಪ ಇವರು ತಿಪ್ಪಮ್ಮ ಗಂಡ ಚಿಗಲೂರು ತಿಪ್ಪಯ್ಯ @ ತಿಮ್ಮಪ್ಪ ಮತ್ತು ಇವರ ಮಗಳಾದ ಪಾರ್ವತಮ್ಮ ಗಂಡ ಪೂಜಾರಿ ಶಿವರುದ್ರಪ್ಪ ಇವರಿಂದ ನೊಂದಾಯಿತ ಕ್ರಯಪತ್ರ ಸಂಖ್ಯೆ 517/81-82 ದಿನಾಂಕ 27-04-1981 ರಂದು ಖರೀದಿಸಿದ್ದು, ಆದರೆ ದಾಖಲೆಗಳ ಪ್ರಕಾರ ವಿಸ್ತೀರ್ಣ 1.76 ಎಕರೆ ಜಮೀನಿದ್ದು, ದಾಸ್ತವೇಜು ತಾಳೆಯಾಗದ ಕಾರಣ ಗೈರು ಮಂಜೂರಾಗಿರುತ್ತದೆ. ಮುಂದುವರೆದು ಮೇಲ್ಮನವಿದಾರರ ಗಂಡನಾದ ಮೂಕಪ್ಪ ಇವರು ಕ್ರಯಕ್ಕೆ ಪಡೆದಿರುತ್ತಾರೆ. ದಿನಾಂಕ 26-08-2016 ರಂದು ಮೇಲ್ಮನವಿದಾರರ ಪರ ವಕೀಲರು ಈ ನ್ಯಾಯಾಲಯಕ್ಕೆ ಹಾಜರಾಗಿ, ಅಪೀಲುದಾರರು 2.00.00 ಎಕರೆ ಜಮೀನನ್ನು ಖರೀದಿಸಿದ್ದು, ಖರೀದಿಸಿದ ಜಮೀನಿನಲ್ಲಿ HLC ಗೆ ಸ್ವಾದೀನವಾಗಿದ್ದು, ಹಾಲಿ ಉಳಿದಿರುವ ವಿಸ್ತೀರ್ಣ 1.76 ಎಕರೆ ಜಮೀನಗೆ ಕ್ರಯ ಪತ್ರ ಆಧರಿಸಿ ಖಾತೆ ಮಾಡಿಕೊಡಲು ಮೇಲ್ಮನವಿ ಸಲ್ಲಿಸಿರುತ್ತಾರೆ. ಕಾರಣ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಆದೇಶ.

ಮುಂದಿನ ಪುಟಕ್ಕೆ....